**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಸಿ(7)2ಪ್ರಾ.ಶಿ.ಅ.ದಾಖಲಾತಿ64/2013-14

ದಿನಾಂಕ:28.02.2015

# ಸುತ್ತೋಲೆ

ವಿಷಯ: ಖಾಸಗಿ ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2015-16 ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸುವ ಬಗ್ಗೆ

ಉಲ್ಲೇಖ:1 ಕರ್ನಾಟಕ ಶಿಕ್ಷಣ ಕಾಯಿದೆ 1983ರ ಹಿನ್ನೆಲೆಯಲ್ಲಿ ರಚಿತವಾದ Karnataka educational institutions (Classification, Regulation and prescription of curricula,etc) Rules 1995 ಮತ್ತು ಸರ್ಕಾರದ ಅಧಿಸೂಚನೆ ಇಡಿ 71ವಿವಿಧ 98,ದಿನಾಂಕ.08.10.1999 ಮತ್ತು ಸರ್ಕಾರಿ ಆದೇಶ ಸಂಖ್ಯೆ:ಇಡಿ04 ವಿ.ವಿ.ಧ 2001 ದಿನಾಂಕ.05.07.2001

2. ಸರ್ಕಾರದ ಅಧಿಸೂಚನೆ ಇಡಿ 71ವಿವಿದ 98, ದಿನಾಂಕ.14.03.2000
3. ಶಿಕ್ಷಣ ಸಚಿವಾಲಯ ಸುತ್ತೋಲೆ ಇಡಿ 117 ಪಗಚ 2003, ದಿನಾಂಕ.28.04.2003
4. ಈ ಕಛೇರಿ ಸುತ್ತೋಲೆ ಸಿ7(7)ದಾಖಲಾತಿ ಸುತ್ತೋಲೆ/2004-05 ದಿನಾಂಕ.31.03.2005
5. ಈ ಕಛೇರಿ ಸುತ್ತೋಲೆ ಸಂಖ್ಯೆ ಸಿ8(1)ಶಾ.ಶಿ.ಅ.ಡೋ.ಹಾ21/11-12 ದಿನಾಂಕ: 08-12-2011.
6. ಈ ಕಛೇರಿ ಸುತ್ತೋಲೆ ಸಂಖ್ಯೆಸಿ7(2)ಪ್ರಾ.ಶಿ.ಅ.ಇತರೆ17/2011-12, ದಿನಾಂಕ: 02/05/2013
7. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಸಿ7(2) ಪ್ರಾಶಿಅದಾಖಲಾತಿ 64/2013-14 ದಿ: 07.01.2014
8. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಸಿ7(2) ಪ್ರಾಶಿಅದಾಖಲಾತಿ 64/2013-14 ದಿ: 24.01.2015

************

ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದಲ್ಲಿ ಪಾರದರ್ಶಕತೆಯಿಲ್ಲದಿರುವುದು ಮತ್ತು ನಿಗಧಿತ ಶುಲ್ಕಕ್ಕಿಂತ ಹೆಚ್ಚು ಹಣ ಸಂಗ್ರಹಿಸುತ್ತಿರುವ ವಿಷಯ ವಿವಿಧ ಸಾಮಾಜಿಕ ವೇದಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ಈ ಸಂಬಂಧ ಸರ್ಕಾರ/ಇಲಾಖೆಯು ಖಚಿತ ನಿರ್ದೇಶನವನ್ನು ಈ ಹಿಂದಿನಿಂದಲೂ ನೀಡುತ್ತಾ ಬಂದಿದೆ. ಆದಾಗ್ಯೂ ಈ ವಿಷಯದ ಕುರಿತು ಸಾಕಷ್ಟು ದೂರುಗಳು ಪದೇ ಪದೇ ಕೇಳಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ನೀಡಿರುವ ಸುತ್ತೋಲೆಗಳನ್ನು ಭಾಗಷಃ ಮಾರ್ಪಡಿಸಿ ವಿದ್ಯಾರ್ಥಿಗಳ ಪ್ರವೇಶವನ್ನು ನಿಯಂತ್ರಿಸಲು ಕೆಳಕಾಣಿಸಿದ ಕಟ್ಟುನಿಟ್ಟಿನ ಸೂಚನೆಗಳನ್ನು ಉಲ್ಲೇಖ(8) ರಲ್ಲಿ ಹೊರಡಿಸಿದ್ದು, ಸದರಿ ಸುತ್ತೋಲೆಯಲ್ಲಿ ಪ್ರಕಟಿಸಲಾಗಿರುವ ವೇಳಾಪಟ್ಟಿಯನ್ನು ಮಾರ್ಪಡಿಸಿ ಪ್ರಕಟಿಸಲಾಗಿದೆ. ಉಳಿದಂತೆ ಎಲ್ಲಾ ಅಂಶಗಳು ಉಲ್ಲೇಖ(8) ರ ಸುತ್ತೋಲೆ ಅನ್ವಯವೇ ಮುಂದುವರೆಯುತ್ತದೆ.

**1.ಖಾಸಗಿ ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ನಡೆಯುವ ವಿದ್ಯಾರ್ಥಿಗಳ ಪ್ರವೇಶಾತಿಯ ಕುರಿತು**

- ವೇಳಾಪಟ್ಟಿ: ಪ್ರತಿ ಶಾಲೆಯು ತಮ್ಮ ಶಾಲೆಯಲ್ಲಿ ಲಭ್ಯವಿರುವ ಸೀಟುಗಳು ಮತ್ತು ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಶಾಲಾ ಪ್ರಕಟಣಾ ಫಲಕದಲ್ಲಿ ಶಾಲಾ ಮುಖ್ಯಸ್ಥರು ಕೆಳಕಾಣಿಸಿದಂತೆ ಪ್ರಕಟಿಸತಕ್ಕದ್ದು.

ಅ)

| ಕ್ರಮಸಂಖ್ಯೆ | ತರಗತಿ | ಲಭ್ಯವಿರುವ ಸೀಟುಗಳು | ಬೋಧನಾ ಮಾಧ್ಯಮ |
|---|---|---|---|
| 01 | 02 | 03 | 04 |

**ಆ)ಪ್ರವೇಶಾತಿಯ ವೇಳಾಪಟ್ಟಿ**

| ವಿವರ | ದಿನಾಂಕ |
|---|---|
| • ಲಭ್ಯ ಸೀಟುಗಳ ಮತ್ತು ಪ್ರವೇಶ ವೇಳಾಪಟ್ಟಿ ಪ್ರಕಟಣೆ | 10.03.2015 |
| • ಅರ್ಜಿ ವಿತರಣೆ | 15.03.2015 ರಿಂದ 30.04.2015 |
| • ಅರ್ಜಿ ಸ್ವೀಕಾರ(ಕಡೆಯ ದಿನಾಂಕ) | 30.04.2015 |
| • ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿ ಮತ್ತು ಕಾರಣ ಸಹಿತ ತಿರಸ್ಕೃತ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 05.05.2015 |
| • ಸಾರ್ವಜನಿಕರು ಮೇಲಿನ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕಡೆ ದಿನಾಂಕ | 08.05.2015 |
| • ಪ್ರಥಮ ಆಯ್ಕೆ ಪಟ್ಟಿ ಪ್ರಕಟಣೆ | 11.05.2015 |
| • ಪ್ರಥಮ ಆಯ್ಕೆ ಪಟ್ಟಿಯಲ್ಲಿರುವವರು ಪ್ರವೇಶ ಹೊಂದಲು ಕಡೆಯ ದಿನಾಂಕ | 21.05.2015 |
| • ದ್ವಿತೀಯ ಆಯ್ಕೆ ಪಟ್ಟಿ ಪ್ರಕಟಣೆ | 25.05.2015 |
| • ದ್ವಿತೀಯ ಆಯ್ಕೆ ಪಟ್ಟಿಯಲ್ಲಿರುವವರು ಪ್ರವೇಶ ಹೊಂದಲು ಕಡೆಯ ದಿನಾಂಕ | 30.05.2015 |

2. ಅ) ಪ್ರಚಲಿತ ನಿಯಮಗಳನ್ವಯ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿಯನ್ನು ಪಾಲಿಸಬೇಕು. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಯಾ ಸಮುದಾಯದ ಮಕ್ಕಳನ್ನು ಪ್ರವೇಶ ಮಾಡುವ ಸಂಖ್ಯೆಯವರೆಗೆ ಮೀಸಲಾತಿ ಅನ್ವಯಿಸುವುದಿಲ್ಲ. (ಉಲ್ಲೇಖ-01 ನಿಯಮ-06)

ಆ) ಎಲ್.ಕೆ.ಜಿ ಅಥವಾ 1 ನೇ ತರಗತಿಗೆ ನೀಡುವ ಪ್ರವೇಶ ಹೊರತುಪಡಿಸಿ ಇತರೆ ತರಗತಿಗಳಿಗೆ ಪ್ರವೇಶ ನೀಡುವಾಗ ಅರ್ಹದಾಯಕ ತರಗತಿಯಲ್ಲಿ ಮಕ್ಕಳು ಗಳಿಸಿದ ಅಂಕಗಳನ್ನು ಆಧರಿಸಿ ಆಯ್ಕೆ ಪಟ್ಟಿಯನ್ನು ತಯಾರಿಸುವುದು.(ಉಲ್ಲೇಖ-01,ನಿಯಮ 12ಸಿ(1))

ಇ) ಸಂಯುಕ್ತ ಶಾಲೆಗಳಾಗಿದ್ದ ಪಕ್ಷದಲ್ಲಿ ಗರಿಷ್ಠ ತರಗತಿಯವರೆಗೆ ಅಥವಾ 10ನೇ ತರಗತಿಯವರೆಗೆ ಯಾವುದು ನಂತರವೋ ಅಲ್ಲಿಯವರೆಗೆ ಆ ಶಾಲೆಯಲ್ಲಿ ಕಲಿಯಲು ಹಕ್ಕುಳ್ಳವನಾಗಿರುತ್ತಾನೆ/ಳೆ. (ಉಲ್ಲೇಖ-1.ನಿಯಮ 13)

ಈ)ಶಾಲಾ ಪ್ರವೇಶಕ್ಕಾಗಿ ವಿದ್ಯಾರ್ಥಿಯನ್ನಾಗಲೀ ಅಥವಾ ಅವನ/ಳ ಪೋಷಕರನ್ನಾಗಲೀ ಪರೀಕ್ಷಿಸುವುದು ಅಥವಾ ಸಂದರ್ಶನ ನಡೆಸುವುದಾಗಲೀ ಕೂಡದು. ಅದು ನಿಷಿದ್ಧ.(ಉಲ್ಲೇಖ1, ನಿಯಮ-15, ಅಲ್ಲದೆ, ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 13(2)(ಬಿ)ಪ್ರಕಾರ ಪ್ರಾರಂಭಿಕ ತರಗತಿಗೆ ಪ್ರವೇಶ ನೀಡುವ ಸಲುವಾಗಿ ಪ್ರವೇಶ ಪರೀಕ್ಷೆ ನಡೆಸಿದಲ್ಲಿ ಮೊದಲ ಸಾರಿಯ ಉಲ್ಲಂಘನೆಗೆ ರೂ. 25 ಸಾವಿರದವರೆಗೆ ದಂಡ ವಿಧಿಸಲಾಗುವುದು. ನಂತರದ ಪ್ರತಿ ಉಲ್ಲಂಘನೆಗೆ ರೂ.50 ಸಾವಿರ ದಂಡ ವಿಧಿಸಲಾಗುವುದು.

**3.ಅನುದಾನಿತ/ಅನುದಾನರಹಿತ ಖಾಸಗಿ ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಯಿಂದ ವಸೂಲಿ ಮಾಡಬಹುದಾದ ಗರಿಷ್ಠ ಶುಲ್ಕ(ರೂ.ಗಳಲ್ಲಿ)ದ ವಿವರ ಮತ್ತು ಕ್ರಮಗಳು**

| ತರಗತಿ | ಅನುದಾನಿತ ಶಾಲೆಗಳು | | | ಅನುದಾನರಹಿತ ಶಾಲೆಗಳು | | |
|---|---|---|---|---|---|---|
| | ಬೋಧನೇತರ ಶುಲ್ಕ ರೂ. | ಬೋಧನಾ ಶುಲ್ಕ | ವಿಶೇಷ ಅಭಿವೃದ್ಧಿ ಶುಲ್ಕ ರೂ | ಬೋಧನೇತರ ಶುಲ್ಕ ರೂ. | ಬೋಧನಾ ಶುಲ್ಕ ರೂ. | ವಿಶೇಷ ಅಭಿವೃದ್ಧಿ ಶುಲ್ಕ ರೂ. |
| 1ರಿಂದ 5 | ಇಲ್ಲ | ಇಲ್ಲ | ಇಲ್ಲ | ಇಲ್ಲ | ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ | 600.00 ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ |
| 6 ರಿಂದ 8ನೇ ತರಗತಿಯವರೆಗೆ | 38.00 ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ | ಇಲ್ಲ | 500.00 ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ | 38.00 ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ | ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ | 600.00 ಆರ್.ಟಿ.ಇ ಕಾಯಿದೆ ಸೆಕ್ಷನ್ 2(ಬಿ) ಅನ್ವಯ |
| 9 ಮತ್ತು 10ನೇ ತರಗತಿಯವರೆಗೆ | 185.00 | 10 ತಿಂಗಳಿಗೆ ಅನುತ್ತೀರ್ಣರಾದ ವಿದ್ಯಾರ್ಥಿಗಳಿಂದ ತರಗತಿ-ರೂ.ಗಳು 9---50 | 500.00 | 185.00 | | |

ಅನುದಾನರಹಿತ ಶಾಲೆಯು ಸಹ ತಮ್ಮ ಶಾಲೆಯಲ್ಲಿ ನಿಯಮಾನುಸಾರ ನಿಗದಿ ಪಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆದ ಬೋಧನಾ ಶುಲ್ಕದ ಮೊತ್ತವನ್ನು ಸಾರ್ವಜನಿಕರ ಮಾಹಿತಿಗಾಗಿ ದೊಡ್ಡ ಅಕ್ಷರಗಳಲ್ಲಿ ಪ್ರಕಟಿಸುವುದು. ಅಲ್ಲದೆ ಸದರಿ ಮಾಹಿತಿಯನ್ನು ಶಾಲೆಯು ಮಾಹಿತಿ ಪುಸ್ತಕದಲ್ಲಿ (ಪ್ರಾಸ್ಪೆಕ್ಟಸ್) ಮುದ್ರಿಸುವುದು ಹಾಗೂ ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

4. ಅ) ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಮತ್ತು ಗುಂಪು-01 ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕವನ್ನು ವಸೂಲಿಸುವಂತಿಲ್ಲ.

ಆ) ಉಲ್ಲೇಖ 1 ನಿಯಮ 3(ಸಿ)ರಂತೆ ಅಭಿವೃದ್ಧಿ ಶುಲ್ಕ ವಸೂಲಿಸಬಹುದು.

ಇ) ಉಲ್ಲೇಖ-2 ನಿಯಮ 4 ರಂತೆ ಖಾಸಗಿ ಶಾಲೆಗಳ ಬೋಧನಾ ಶುಲ್ಕವನ್ನು ವಸೂಲಿಸಬಹುದು.

ಈ) ಕಟ್ಟಡ ನಿರ್ಮಾಣ ಮತ್ತು ಇತರ ವಿಸ್ತರಣೆಗಾಗಿ ವಿದ್ಯಾರ್ಥಿ ಪ್ರವೇಶ ಹೊಂದುವಾಗ ಒಂದು ವರ್ಷದ ಬೋಧನಾ ಶುಲ್ಕಕ್ಕಿಂತ ಹೆಚ್ಚಾಗದಂತೆ ಒಂದು ಬಾರಿ ಮಾತ್ರ ವಿದ್ಯಾರ್ಥಿಯಿಂದ ವಸೂಲಿಸಬಹುದು. (ಉಲ್ಲೇಖ-2,ನಿಯಮ-05)

----3

ಉ) ಈ ಶುಲ್ಕಗಳನ್ನು ಹೊರತುಪಡಿಸಿ ವಿದ್ಯಾರ್ಥಿಯಿಂದ ಅಥವಾ ಪೋಷಕರು ಅಥವಾ ಆ ಪ್ರವೇಶಾತಿಗೆ ಸಂಬಂಧಿಸಿದಂತೆ ಯಾರಿಂದಲೂ ವಂತಿಕೆ (ಡೊನೇಷನ್) ಪಡೆಯತಕ್ಕದ್ದಲ್ಲ. (ಉಲ್ಲೇಖ-2 ನಿಯಮ-3, ಅಲ್ಲದೆ ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 13(2)(ಎ)ಪ್ರಕಾರ ಮಗುವಿಗೆ ಪ್ರವೇಶ ನೀಡುವಾಗ ಕ್ಯಾಪಿಟೇಷನ್ ಫೀ ವಸೂಲು ಮಾಡಿದಲ್ಲಿ, ವಸೂಲು ಮಾಡಿದ ಕ್ಯಾಪಿಟೇಷನ್ ಶುಲ್ಕದ 10 ಪಟ್ಟು ದಂಡ ವಿಧಿಸಲು ಅವಕಾಶವಿದೆ.)

ಊ) ವರ್ಗಾವಣೆ ಪತ್ರ, ಅಂಕ ದಾಖಲೆ; ಅಧ್ಯಯನ ಪತ್ರ ;ನಡೆತ ಪತ್ರ; ಪ್ರವೇಶ ದಾಖಲಾತಿ ಉದ್ಧೃತ ಮತ್ತು ಇತರೆ ಪ್ರಮಾಣ ಪತ್ರಗಳಿಗೆ ರೂ .25 ಮತ್ತು ದಾಖಲೆಗಳು 03 ವರ್ಷ ಮೀರಿದ್ದರೆ ಹುಡುಕುವ ಶುಲ್ಕವಾಗಿ 25.ರೂ ವಸೂಲಿಸಬಹುದು. (ಉಲ್ಲೇಖ-1,ನಿಯಮ-06)

ಋ) ಪ್ರವೇಶ ಅರ್ಜಿಗೆ ಗರಿಷ್ಟ 5 ರೂ ;ಪ್ರಾಸ್ಪೆಕ್ಟಸ್‌ಗೆ ಗರಿಷ್ಟ 20 ರೂ ವಸೂಲಿಸಬಹುದು.(ಉಲ್ಲೇಖ-1 ನಿಯಮ-14.2)

ಎ) ಮೇಲಿನ ಕೋಷ್ಟಕವನ್ನು ಪ್ರತಿ ಶಾಲೆಯ ಪ್ರವೇಶ ಪ್ರಕ್ರಿಯೆ ಮುಗಿಯುವ ತನಕ ಕಡ್ಡಾಯವಾಗಿ ಪ್ರದರ್ಶಿಸುವುದು.

ಏ) ಅನುದಾನರಹಿತ ಶಾಲೆಗಳಲ್ಲಿ ಶೇಕಡ 25 ರ ಪ್ರಮಾಣದ ಆರ್.ಟಿ.ಇ ಸೀಟುಗಳನ್ನು ಭರ್ತಿ ಮಾಡಲು ನೀಡಿರುವ ಪ್ರತ್ಯೇಕ ಸೂಚನೆಗಳನ್ನು ಪಾಲಿಸುವುದು. ಉಳಿದ ಶೇಕಡ 75ರ ಪ್ರಮಾಣದ ಸೀಟುಗಳನ್ನು ಭರ್ತಿ ಮಾಡಲು ಪಾರದರ್ಶಕವಾದ ವಿಧಿವಿಧಾನಗಳನ್ನು ಆಡಳಿತ ಮಂಡಳಿ ತಮ್ಮ ಬೈಲಾದಲ್ಲಿ ನಿರ್ದಿಷ್ಟಪಡಿಸಿ ಸಾಮಾನ್ಯ ವರ್ಗದ ಸೀಟುಗಳನ್ನು ಲಾಟರಿ ಮೂಲಕ ಪೋಷಕರ ಸಮ್ಮುಖದಲ್ಲಿ ಆಯ್ಕೆ ಮಾಡುವುದು. ಶೇಕಡ 25 ರ ಆರ್.ಟಿ.ಇ ಸೀಟುಗಳನ್ನು ಹೊರತುಪಡಿಸಿ ಲಭ್ಯವಿರುವ ಶೇ.75 ಸೀಟುಗಳಲ್ಲಿ ಸಿಬ್ಬಂದಿಗೆ, ಶಾಲೆಗೆ ಈಗಾಗಲೇ ದಾಖಲಾಗಿರುವ ಒಡಹುಟ್ಟಿದವರಿಗೆ, ವಿಕಲಚೇತನರಿಗೆ, ಅನಾಥರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಗುಂಪುಗಳಿಗೆ (ಶಾಲಾ ಬೈಲಾದಲ್ಲಿ ಮೀಸಲಾತಿ ನಿಗದಿಪಡಿಸಿಕೊಂಡಿರುವಂತೆ) ಮೀಸಲಿಟ್ಟಿರುವ ಸೀಟುಗಳ ಸಂಖ್ಯೆ, ಮಾಧ್ಯಮ, ತರಗತಿ, ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ, ನಿಗದಿಪಡಿಸಿರುವ ಬೋಧನಾ ಶುಲ್ಕ, ಮುಂತಾದ ಮಾಹಿತಿಯನ್ನು ಶಾಲಾ ಆವರಣದಲ್ಲಿ 4*6 ಸೈಜಿನ ಫ್ಲೆಕ್ಸ್‌ನಲ್ಲಿ ಪ್ರಕಟಿಸುವುದು. ಸದರಿ ಮಾಹಿತಿಯನ್ನು ಶಾಲೆಯ ಮತ್ತು ಇಲಾಖೆಯ ವೆಬ್ ಸೈಟಿನಲ್ಲಿ ಪ್ರಕಟಿಸುವುದು. ಅಲ್ಲದೇ ಒಂದು ಪ್ರತಿಯನ್ನು ಬಿಇಓ ಮತ್ತು ಉಪನಿರ್ದೇಶಕರಿಗೆ ಕಳುಹಿಸಿಕೊಡುವುದು. ಸದರಿ ಸೂಚನೆ ಅನುಷ್ಠಾನಗೊಳಿಸಿರುವುದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾತರಿ ಪಡಿಸಿಕೊಳ್ಳುವುದು.

## ಪ್ರವೇಶ ಪ್ರಕ್ರಿಯೆ ನಿಯಂತ್ರಣ

- ಜಿಲ್ಲೆ/ತಾಲ್ಲೂಕು ಹಂತದ ಅಧಿಕಾರಿಗಳ ಕ್ರಮಾನುಸರಣೆ
- ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ **(DISTRICT LEVEL EDUCATION REGULATING AUTHOURITY)** ಅಧ್ಯಕ್ಷರನ್ನು ಸಂಪರ್ಕಿಸಿ ಕೈಗೊಳ್ಳಬೇಕಾದ ಕ್ರಮದ ಕುರಿತು ಚರ್ಚಿಸಿ.
- ನಿಮ್ಮ ಅಧೀನ ಅಧಿಕಾರಿಗಳ ಸಭೆ ಕರೆದು -ಇರುವ ನಿಯಮಗಳನ್ನು ಚರ್ಚಿಸಿ ಕ್ರಿಯಾ ಯೋಜನೆ ರೂಪಿಸಿಕೊಳ್ಳಿ.
- ಬ್ಲಾಕ್ ಹಂತದಲ್ಲಿ ಖಾಸಗಿ ಶಾಲೆಗಳ ಮುಖ್ಯಸ್ಥರ ಸಭೆ ಕರೆದು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಚರ್ಚಿಸಿ ಮಾರ್ಗದರ್ಶನ ಮಾಡಿ.
- ಅಗತ್ಯವೆನಿಸಿದ ಆಡಳಿತ ಮಂಡಳಿ/ಮ್ಯಾನೇಜ್‌ಮೆಂಟ್ ಕಮಿಟಿಯವರನ್ನು ಸಂಪರ್ಕಿಸಿ ವಸ್ತುಸ್ಥಿತಿ ವಿವರಿಸಿ ಕೈಗೊಳ್ಳಬೇಕಾದ ಕ್ರಮ ಕುರಿತು ತಿಳಿಸಿ.
- ಶುಲ್ಕ ವಸೂಲಾತಿಯ ನಿಯಮಗಳ ಕುರಿತು ಉಸ್ತುವಾರಿ ಅಧಿಕಾರಿಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಇರುವ ನಿಯಮಾವಳಿಗಳನ್ನು ಮನವರಿಕೆ ಮಾಡಿಕೊಡುವುದು.

- ಪ್ರವೇಶ ಪ್ರಕ್ರಿಯೆ ಮತ್ತು ಶುಲ್ಕ ವಸೂಲಾತಿಯಲ್ಲಿ ಉಲ್ಲಂಘನೆ ಪ್ರಕರಣಗಳನ್ನು ಸಾರ್ವಜನಿಕರು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ **(DISTRICT LEVEL EDUCATION REGULATING AUTHOURITY)** ಗಮನಕ್ಕೆ ತರುವಂತೆ ವ್ಯಾಪಕ ಪ್ರಚಾರ ನೀಡತಕ್ಕದ್ದು. ಇದಕ್ಕಾಗಿ ಸಮೂಹ ಮಾಧ್ಯಮಗಳಲ್ಲಿ ಪ್ರಚಾರ ಮಾಡಲು ಕ್ರಮ ತೆಗೆದುಕೊಳ್ಳುವುದು. ಆರ್.ಟಿ.ಇ ಅಡಿ ನೋಂದಣಿ ಮಾಡಿಸಿದ ಮಾನ್ಯತೆ ಪಡೆಯದ ಶಾಲೆಗಳ ಆಡಳಿತ ಮಂಡಳಿಗೆ ಶಿಕ್ಷಣ ಹಕ್ಕು ಕಾಯ್ದೆ-2009ರ ಸೆಕ್ಷನ್ 12 (3) , ಸೆಕ್ಷನ್ 18 ಮತ್ತು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕುಗಳ ಕಾಯ್ದೆ-2012 ರ ನಿಯಮ 12 ರ ಅನ್ವಯ ಮಾನ್ಯತೆ ರದ್ದುಪಡಿಸಲು ಅಥವಾ ನಿರಾಕ್ಷೇಪಣಾ ಪತ್ರ (ಎನ್‌ಓಸಿ) ಹಿಂಪಡೆಯುವ ಬಗ್ಗೆ ನೋಟೀಸು ನೀಡಿ ಕ್ರಮ ತೆಗೆದುಕೊಳ್ಳುವುದು.
- ಮಾನ್ಯತೆ ಇಲ್ಲದೇ ಅಥವಾ ನಿರಾಕ್ಷೇಪಣಾ ಪತ್ರ ಪಡೆಯದೇ ತರಗತಿ ನಡೆಸುವ ಶಾಲೆಗಳ ವಿರುದ್ಧ ಶಿಕ್ಷಣ ಹಕ್ಕು ಕಾಯ್ದೆ-2009 ರ ಸೆಕ್ಷನ್ 18(5) ರ ಪ್ರಕಾರ ದಂಡ ವಿಧಿಸಲು ಕ್ರಮ ತೆಗೆದುಕೊಳ್ಳುವುದಲ್ಲದೇ ಅನಧಿಕೃತ ಶಾಲೆಯೆಂದು ಘೋಷಣೆ ಮಾಡಿ ಕ್ರಿಮಿನಲ್ ದಾವೆ ಹೂಡತಕ್ಕದ್ದು.
- ಗಂಭೀರ ಸ್ವರೂಪದ ದೂರುಗಳಿದ್ದಲ್ಲಿ ಸಂಪೂರ್ಣ ಮಾಹಿತಿ ಪಡೆದು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಗಮನಕ್ಕೆ ಅಥವಾ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಗಳ ಗಮನಕ್ಕೆ ತಂದು ಅನುಸರಣ ಕ್ರಮ ತೆಗೆದುಕೊಳ್ಳುವುದು. ಪ್ರತಿ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. ಕಛೇರಿ ವೇಳೆಯಲ್ಲಿ ಸದರಿ ಸಹಾಯವಾಣಿಯನ್ನು ನೋಡಿಕೊಳ್ಳಲು ಒಬ್ಬರನ್ನು ನಿಯೋಜಿಸುವುದು. ಕರೆಗಳ ವಿವರವನ್ನು ಒಂದು ವಹಿಯಲ್ಲಿ ದಾಖಲಿಸಬೇಕು. ಅಲ್ಲದೆ ಸಾರ್ವಜನಿಕರ ದೂರುಗಳ ಬಗ್ಗೆ ಕ್ಷೇತ್ರ

----4

ಶಿಕ್ಷಣಾಧಿಕಾರಿಗಳಿಂದ ವರದಿ ಪಡೆದು ಪ್ರಕರಣ ಇತ್ಯರ್ಥಪಡಿಸುವುದು. ಪ್ರವೇಶ ಪ್ರಕ್ರಿಯೆ ನಡೆಯುವ ಹಂತದಲ್ಲಿ-ವಿಚಕ್ಷಣ ದಳವನ್ನು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಜಿಲ್ಲಾ ಹಂತದಲ್ಲಿ ನೇಮಿಸಿ ಕ್ರಮ ಮಾಡುವುದು.

- ಪ್ರವೇಶ ಪ್ರಕ್ರಿಯೆ ಉಲ್ಲಂಘನೆ ಪ್ರಕರಣ ಮತ್ತು ಕೈಗೊಂಡ ಕ್ರಮದ ಕುರಿತು ತ್ವರಿತವಾಗಿ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು.
- ಪ್ರತಿ ತಿಂಗಳ 05 ನೇ ತಾರೀಖಿನೊಳಗೆ ಅನುಬಂಧ-1ರ ಮಾಹಿತಿಯನ್ನು ಕೇಂದ್ರ ಕಛೇರಿಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ನಿರ್ದೇಶಕರಿಗೆ ಪ್ರತ್ಯೇಕವಾಗಿ ಕಳುಹಿಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ.

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ), ರವರ ಮುಖಾಂತರ.

ಪ್ರತಿಯನ್ನು,

1. ಗೌರವಪೂರ್ವಕವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01 ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ.
5. ರಾಜ್ಯದ ಎಲ್ಲಾ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ.
7. ರಾಜ್ಯದ ಎಲ್ಲಾ ಸಹನಿರ್ದೇಶಕರಿಗೆ.
8. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
9. ಉಪನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ,
10. ಕಛೇರಿ ಪ್ರತಿ.